## ನಿಮ್ಮೊಡನೆ

# ಪರೀಕ್ಷೆಯ ಭಯ ಮತ್ತು ಒತ್ತಡ ಮಕ್ಕಳ ಬೆನ್ನಿಗೆ ನಿಲ್ಲಲಿ ಸಮಾಜ

ಈ ಒಂದು ವರ್ಷದ ಅವಧಿಯಲ್ಲಿ ನಮ್ಮ ಸಾಮಾಜಿಕ ಬದುಕಿನಲ್ಲಿ, ಅರ್ಥವ್ಯವಸ್ಥೆಯಲ್ಲಿ ಆಗಿರುವ ಪಲ್ಲಟಗಳನ್ನು ಗಮನಿಸಿದರೆ ಕೊರೊನಾ ಸಾಂಕ್ರಾಮಿಕದ ಪರಿಣಾಮದಿಂದ ಯಾವೊಂದು ವಲಯವೂ, ವರ್ಗವೂ ತಪ್ಪಿಸಿಕೊಂಡಂತೆ ಕಾಣುವುದಿಲ್ಲ. ಸಂಬಂಧಗಳನ್ನು ಮುರಿದಿದೆ, ಬೆಸೆದಿದೆ. ಕಷ್ಟಕ್ಕೆ ದೂಡಿದೆ. ಅದನ್ನು ಎದುರಿಸುವ ಬಗೆಯನ್ನೂ ಕಲಿಸಿದೆ. ರೂಢಿಗತ ನಡಾವಳಿಗಳನ್ನು ಕಂಡರಿಯದ ರೀತಿಯಲ್ಲಿ ಬದಲಾವಣೆಗಳಿಗೆ ತೆರೆದಿರಿಸಿದೆ. ಮನೆಯನ್ನೇ ಶಾಲೆಯಾಗಿಸಿದೆ, ಕಚೇರಿಯಾಗಿಸಿದೆ. ಹೊಸ ಮಾರ್ಗೋಪಾಯಗಳ ಶೋಧಕ್ಕೆ ಪ್ರೇರೇಪಿಸಿದೆ. ಹೊಸ ರೀತಿಯಲ್ಲಿ ಯೋಚಿಸುವಂತೆಯೂ ಮಾಡಿದೆ.

ಶಾಲಾ–ಕಾಲೇಜುಗಳ ಕಲಿಕೆ ಮತ್ತು ಬೋಧನೆಯನ್ನು ಸಾರ್ವತ್ರಿಕ ನೆಲೆಯಲ್ಲಿ ಆನ್‌ಲೈನ್‌ಗೆ ಒಗ್ಗಿಸಿದ ಶ್ರೇಯ ಕೊರೊನಾಕ್ಕೇ ಸಲ್ಲಬೇಕು. ಅದರ ಇತಿಮಿತಿ ಏನೇ ಇರಲಿ, ಇಂತಹದೊಂದು ಸಾಧ್ಯತೆಯನ್ನು ವಿಸ್ತೃತ ನೆಲೆಯಲ್ಲಿ ಪ್ರಯೋಗಕ್ಕೆ ಒಡ್ಡಲು ಕಾರಣವಾಗಿದ್ದು ಈ ಸಾಂಕ್ರಾಮಿಕ ಎಂಬುದರಲ್ಲಿ ಎರಡು ಮಾತಿಲ್ಲ. ವರದಿಯಾಗುತ್ತಿರುವ ಕೊರೊನಾ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಆಗಿರುವುದರಿಂದ ಶಾಲೆ–ಕಾಲೇಜುಗಳ ಬಾಗಿಲು ತೆರೆದುಕೊಂಡಿದೆ. ಮನೆಯಲ್ಲೇ ಮುದುಡಿ ಕುಳಿತಿದ್ದ ಮಕ್ಕಳು ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಸಹಪಾಠಿಗಳ ಜತೆಗೂಡಿ ಉತ್ಸಾಹದಿಂದ ಓಡಾಡುತ್ತಿದ್ದಾರೆ.

ಅದರ ಬೆನ್ನಿಗೇ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಪರೀಕ್ಷೆಯ ಸಿದ್ಧತೆಗಳೂ ಬಿರುಸು ಪಡೆದಿವೆ. ಈ ಶೈಕ್ಷಣಿಕ ಸಾಲಿನಲ್ಲಿ ಕಲಿಕೆಯು ಬಹುಮಟ್ಟಿಗೆ ಆನ್‌ಲೈನ್, ಪರೀಕ್ಷೆ ಮಾತ್ರ ಆಫ್‌ಲೈನ್! ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಬೇಕು ಎಂಬ ಕೂಗು ಬಹಳ ವರ್ಷಗಳಿಂದ ಇದೆಯಾದರೂ ಏಕೋ ಅದು ಸಮೂಹಧ್ವನಿಯಾಗಿ ಪರಿವರ್ತನೆಯಾಗಿಲ್ಲ. ನೆನಪಿನ ಶಕ್ತಿಯನ್ನು ಪರೀಕ್ಷಿಸುವಂತಹ ರೀತಿಯಲ್ಲೇ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. 'ಪರೀಕ್ಷೆಗಾಗಿ ಓದು' ಎಂಬ ರೂಢಿಗತ ಜಾಡು ಬದಲಿಸಲು ಈ ಅಸಾಮಾನ್ಯ ಸಂದರ್ಭದಲ್ಲಿ ಅವಕಾಶ ಇತ್ತು. ಆದರೆ, ಅದನ್ನು ಬಳಸಿಕೊಂಡ ನಿದರ್ಶನಗಳು ಹೆಚ್ಚಿಗೆ ಕಾಣಸಿಗುತ್ತಿಲ್ಲ. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ಹೊರತುಪಡಿಸಿ, ಉಳಿದ ತರಗತಿಗಳ ವಿದ್ಯಾರ್ಥಿಗಳ ಸಾಮರ್ಥ್ಯದ ಮೌಲ್ಯಮಾಪನವನ್ನು ಬೇರೆ ರೀತಿಯಲ್ಲಿ ಅರಿಯಲು, ದಾಖಲಿಸಲು ಇರುವ ಅವಕಾಶಗಳ ಕುರಿತು ಚಿಂತಿಸಬಹುದಿತ್ತು.

ಪರೀಕ್ಷೆ ಎಂಬುದು ಮಕ್ಕಳ ಪಾಲಿಗೆ ಶಿಕ್ಷೆಯಂತಾಗಿದೆ ಎಂಬುದನ್ನು ಒಪ್ಪುತ್ತಲೇ ಅದನ್ನೇ ಉಳಿಸಿಕೊಳ್ಳಲು ಬಯಸುವುದು ವಿರೋಧಾಭಾಸದ ನಡೆ. ಕಲಿಕೆ ಮತ್ತು ಮೌಲ್ಯಮಾಪನ ಒಟ್ಟೊಟ್ಟಿಗೆ ಹೋಗಬೇಕು. ಮೌಲ್ಯಮಾಪನವು ಕಲಿಕಾ ಪ್ರಕ್ರಿಯೆಯ ಭಾಗವಾಗಿರಬೇಕು. ಮೌಲ್ಯಮಾಪನಕ್ಕೆ ಒಳಗಾಗುತ್ತಿದ್ದೇವೆ ಎಂದು ವಿದ್ಯಾರ್ಥಿಗಳಿಗೆ ಗೊತ್ತಾಗಬಾರದು. ಅಂತಹ ಉಪಕ್ರಮಗಳನ್ನು ಅಳವಡಿಸಿಕೊಂಡಾಗ ಸಹಜ ಹಾಗೂ ನಿರಂತರ ಕಲಿಕೆ ಸಾಧ್ಯವಾಗಲಿದೆ. ಇಲ್ಲವಾದಲ್ಲಿ ಪರೀಕ್ಷೆಗಾಗಿ ಓದು ಎಂಬಂತಾಗುತ್ತದೆ.

ಕೋವಿಡ್ ಕಾರಣದಿಂದ ಶಾಲೆಗಳು ಮುಚ್ಚಿದ್ದರಿಂದ ಪ್ರಾಥಮಿಕ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದಲ್ಲಿ ತೀವ್ರ ಹಿನ್ನಡೆ ಆಗಿದೆ ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧ್ಯಯನ ವರದಿಯೊಂದು ಹೇಳಿದೆ. ಪ್ರಾಥಮಿಕ ಹಂತದಲ್ಲಿ ಭಾಷೆ ಮತ್ತು ಗಣಿತ ವಿಷಯದಲ್ಲಿನ ಕಲಿಕೆಯು ಮುಂದಿನ ಹಂತಗಳ ಕಲಿಕೆಗೆ ಪೂರಕವಾಗಿ ಒದಗಿಬರುತ್ತದೆ, ಬುನಾದಿಯಂತೆ ನಿಲ್ಲುತ್ತದೆ. ಕಲಿಕಾ ನಷ್ಟವನ್ನು ಸರಿದೂಗಿಸುವುದು ಈಗ ಸವಾಲಿನ ಕೆಲಸ. ಐದು ರಾಜ್ಯಗಳ 44 ಜಿಲ್ಲೆಗಳಲ್ಲಿ ಈ ವರ್ಷದ ಜನವರಿಯಲ್ಲಿ ನಡೆಸಿದ ಕ್ಷೇತ್ರಾಧ್ಯಯನದಲ್ಲಿ ಈ ಅಂಶ ಬೆಳಕಿಗೆ ಬಂದಿದೆ ಎಂದು ವರದಿ ಹೇಳಿದೆ. 1,137 ಶಾಲೆಗಳ 16,067 ವಿದ್ಯಾರ್ಥಿಗಳು ಈ ಸಮೀಕ್ಷೆಗೆ ಒಳಗಾಗಿದ್ದಾರೆ.

> ಮಕ್ಕಳ ಕಲಿಕೆಯಲ್ಲಿ ಹಿನ್ನಡೆ ಆಗಿದೆ ಎಂಬುದಕ್ಕೆ ಅಧ್ಯಯನಗಳ ಆಧಾರವೇನೂ ಬೇಕಾಗಿಲ್ಲ. ಶಾಲಾ–ಕಾಲೇಜುಗಳಲ್ಲಿ ಕಲಿಯುತ್ತಿರುವ ಮಕ್ಕಳಿರುವ ಪ್ರತೀ ಕುಟುಂಬದ ಅನುಭವಕ್ಕೆ ಬಂದಿರುವ ಸಂಗತಿಯಿದು. ಅದನ್ನು ತುಂಬುವ ಬಗೆಯನ್ನು ಬೋಧಕರು, ಪೋಷಕರು ಕಂಡುಕೊಳ್ಳಬೇಕಿದೆ.




ಮಕ್ಕಳ ಕಲಿಕೆಯಲ್ಲಿ ಹಿನ್ನಡೆ ಆಗಿದೆ ಎಂಬುದಕ್ಕೆ ಅಧ್ಯಯನಗಳ ಆಧಾರವೇನೂ ಬೇಕಾಗಿಲ್ಲ. ಶಾಲಾ–ಕಾಲೇಜುಗಳಲ್ಲಿ ಕಲಿಯುತ್ತಿರುವ ಮಕ್ಕಳಿರುವ ಪ್ರತೀ ಕುಟುಂಬದ ಅನುಭವಕ್ಕೆ ಬಂದಿರುವ ಸಂಗತಿಯಿದು. ಅದನ್ನು ತುಂಬುವ ಬಗೆಯನ್ನು ಬೋಧಕರು, ಪೋಷಕರು ಕಂಡುಕೊಳ್ಳಬೇಕಿದೆ. ಪರೀಕ್ಷೆಗಿಂತ ಮುಖ್ಯವಾದುದು ಕಲಿಕೆ ಎಂಬುದನ್ನು ಮನದಟ್ಟು ಮಾಡಿಸುವ ಕೆಲಸ ಆಗಬೇಕು. ಪರಿಹಾರ ಬೋಧನೆ, ಶೈಕ್ಷಣಿಕ ಅವಧಿಯ ಮರುಹೊಂದಾಣಿಕೆಯಂತಹ ಕ್ರಮಗಳಿಂದ ಕೊರತೆ ತುಂಬಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಪರೀಕ್ಷೆಯ ಭಯ ಮತ್ತು ಅದು ಒಡ್ಡುವ ಒತ್ತಡಗಳನ್ನು ನಿವಾರಿಸಬೇಕು. ಕೊರೊನಾ ಸೃಷ್ಟಿಸಿದ ಅಸಾಮಾನ್ಯ ಸಂದರ್ಭವನ್ನು ಒತ್ತಡಮುಕ್ತವಾಗಿ ದಾಟಿ ಮುಂದೆ ಹೋಗಲು ಮತ್ತು ಕಲಿಕೆಗೆ ಸಂಬಂಧಿಸಿದ ಕೊರತೆಗಳನ್ನು ತುಂಬಿಕೊಳ್ಳಲು ಮಕ್ಕಳಿಗೆ ಎಲ್ಲ ರೀತಿಯಲ್ಲೂ ನೆರವಾಗಬೇಕು. ಶಾಲಾ ಕಾಲೇಜು ಆಡಳಿತ ಮಂಡಳಿಗಳು ಮತ್ತು ಪೋಷಕರಿಂದ ಈ ದಿಸೆಯಲ್ಲಿ ಪೂರಕ ಸ್ಪಂದನ ದೊರೆತರೆ ಮಕ್ಕಳ ಕಲಿಕೆ ಸಹಜ ಲಯಕ್ಕೆ ಹೊರಳಿಕೊಳ್ಳಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಅಂತಹ ಸ್ಪಂದನವನ್ನು ನಿರೀಕ್ಷಿಸೋಣ.

■ ಎನ್. ಉದಯಕುಮಾರ್